# ನಿಮ್ಮೊಡನೆ

## ಭಕ್ತಿಯೊಂದಿಗೆ ಮಿಳಿತಗೊಳ್ಳಲಿ ವಿವೇಚನೆ ವಿಶ್ವಪ್ರಜ್ಞೆ ರೂಪಿಸಲಿ ಗಣೇಶೋತ್ಸವ ಆಚರಣೆ

ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಕಳೆದ ಎರಡು ವರ್ಷಗಳಿಂದ ಕವಿದಿದ್ದ ಕೊರೊನಾ ಸೋಂಕಿನ ಆತಂಕದ ನೆರಳು ಈ ವರ್ಷ ತಿಳಿಯಾಗಿದೆ. ಕೊರೊನಾ ಸೋಂಕು ತಹಬದಿಗೆ ಬಂದು, ಜನಜೀವನ ಹೆಚ್ಚೂಕಡಿಮೆ ಯಥಾಸ್ಥಿತಿಗೆ ಮರಳಿದೆ. ಹಾಗಾಗಿ, ಗಣೇಶೋತ್ಸವ ಆಚರಣೆಗಿದ್ದ ನಿರ್ಬಂಧಗಳನ್ನು ಸರ್ಕಾರ ತೆಗೆದುಹಾಕಿದೆ. ಕೊರೊನಾ ಸೋಂಕು ತೀವ್ರವಾಗಿದ್ದ ಸಂದರ್ಭದಲ್ಲಿ ಗಣೇಶೋತ್ಸವ ಆಚರಣೆಗೆ ಸರ್ಕಾರ ಷರತ್ತುಬದ್ಧ ಅವಕಾಶ ಕಲ್ಪಿಸಿತ್ತು. ಐದು ದಿನಗಳೊಳಗೆ ಗಣೇಶನ ಮೂರ್ತಿ ವಿಸರ್ಜಿಸುವಂತೆ ನಿರ್ಬಂಧಿಸಲಾಗಿತ್ತು ಹಾಗೂ ಉತ್ಸವದ ಸಂದರ್ಭದಲ್ಲಿ ಮನರಂಜನೆ ಕಾರ್ಯಕ್ರಮಗಳು ಹಾಗೂ ಮೆರವಣಿಗೆ ನಡೆಸಲು ಅವಕಾಶ ನಿರಾಕರಿಸಲಾಗಿತ್ತು. ಸಾರ್ವಜನಿಕವಾಗಿ ಗರಿಷ್ಠ 4 ಅಡಿಗಳವರೆಗಿನ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆಗಷ್ಟೇ ಅವಕಾಶ ಕಲ್ಪಿಸಲಾಗಿತ್ತು. ಈ ಷರತ್ತುಗಳು ತೆರವುಗೊಳ್ಳುವುದರೊಂದಿಗೆ ಸಾರ್ವಜನಿಕ ಗಣೇಶೋತ್ಸವ ಈ ವರ್ಷ ಸಹಜವಾಗಿಯೇ ಕಳೆಗಟ್ಟಲಿದೆ.

ಉಳಿದ ಯಾವ ಹಬ್ಬಗಳಿಗೂ ಇಲ್ಲದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಯಾಮ ಗಣೇಶ ಚತುರ್ಥಿಗಿದೆ. ಗಣೇಶೋತ್ಸವ ಆಚರಣೆ, ವಿವಿಧ ಪ್ರಕಾರಗಳ ಕಲಾವಿದರ ಸೃಜನಶೀಲ ಅಭಿವ್ಯಕ್ತಿಯ ಅನಾವರಣಕ್ಕೆ ವೇದಿಕೆಯಾಗುವುದು, ಸ್ಥಳೀಯ ಪ್ರತಿಭೆಗಳ ಪ್ರತಿಭಾ ಪ್ರದರ್ಶನ ಹಾಗೂ ಸಂಘಟನಾ ಚಾತುರ್ಯಕ್ಕೆ ಪೂರಕವಾಗಿ ಪರಿಣಮಿಸುವುದನ್ನು ಗಮನಿಸಬೇಕು. ಈ ಸಾಂಸ್ಕೃತಿಕ ಹಾಗೂ ಸಮಾಜಮುಖಿ ಸಾಧ್ಯತೆಗಳಿಂದಾಗಿಯೇ ಗಣೇಶೋತ್ಸವದಂಥ ಆಚರಣೆಗಳನ್ನು ನಿರ್ದಿಷ್ಟ ಧರ್ಮದ ಸಂಭ್ರಮವನ್ನಾಗಿ ನೋಡುವುದು ಸಾಧ್ಯವಿಲ್ಲ. ಸಮಾಜವನ್ನು ಸಾಂಸ್ಕೃತಿಕವಾಗಿ ಒಗ್ಗೂಡಿಸುವ ಆಶಯದ ಆಚರಣೆಗಳನ್ನು ಊರಹಬ್ಬದ ರೀತಿಯಲ್ಲಿ, ಎಲ್ಲ ಧರ್ಮೀಯರ ಸಂಭ್ರಮದ ರೂಪದಲ್ಲಿ ನೋಡಬೇಕು.

ದೇವರುಗಳ ಪರಿಕಲ್ಪನೆಯ ಹಿನ್ನೆಲೆಯಲ್ಲೂ ಗಣೇಶ ಜನಮನಕ್ಕೆ ಹತ್ತಿರವಾಗುವ ದೈವ. ಮನುಷ್ಯರಂತೆಯೇ ಜಿಹ್ವಾಚಾಪಲ್ಯದ ಸಂಕೇತವಾದ ಗಣಪ, ಜ್ಞಾನರೂಪಿಯೂ ಹೌದು. ಮಣ್ಣು ಹಾಗೂ ನೀರಿನ ನಂಟಿನಿಂದಾಗಿ ಗಣೇಶ ಪ್ರಕೃತಿಗೆ ಹತ್ತಿರವಾದವನು. ಗಣೇಶ ಮತ್ತು ಷಣ್ಮುಖರನ್ನು ನಮ್ಮ ಹಿರಿಯರು ವಿಶ್ವಪ್ರಜ್ಞೆಯ ಭಿನ್ನ ರೂಪಗಳನ್ನಾಗಿ ನೋಡಿದ್ದಾರೆ. ಷಣ್ಮುಖ ಚಲನಶೀಲ ಜಗತ್ತಿನ ಸಂಕೇತವಾದರೆ, ಇರುವಲ್ಲಿಯೇ ವಿಶ್ವಪ್ರಜ್ಞೆಯನ್ನು ರೂಪಿಸಿಕೊಳ್ಳಲು ಗಣೇಶನಿಗಿಂತಲೂ ಮಿಗಿಲಾದ ರೂಪಕ ಮತ್ತೊಂದಿಲ್ಲ. ವಕ್ರತುಂಡನ ಆಕಾರ ಹಾಗೂ ಮನೋಧರ್ಮ ಮನುಷ್ಯನ ಮಿತಿ ಹಾಗೂ ಸಾಧ್ಯತೆಗಳ ಪ್ರತೀಕ. ಈ ಗಣನಾಥ ವಿವೇಕ ಮತ್ತು ಸಾವಧಾನದ ರೂಪವೂ ಹೌದು. ಹೀಗೆ ಅನೇಕ ಕಾರಣಗಳಿಂದಾಗಿ, ಗಣೇಶ ದೈವದ ಚೌಕಟ್ಟನ್ನು ಮೀರಿ, ನಮ್ಮೊಳಗನ್ನು ನೋಡಿಕೊಳ್ಳಲು ಅಥವಾ ನಮ್ಮ ಬದುಕನ್ನು ರೂಪಿಸಿಕೊಳ್ಳಲು ಕನ್ನಡಿಯಾಗಿ ಒದಗಿಬರುತ್ತಾನೆ.

ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಸಾರ್ವಜನಿಕ ಗಣೇಶೋತ್ಸವವನ್ನು ದೇಶಪ್ರೇಮ ಉದ್ದೀಪನದ ವೇದಿಕೆಯನ್ನಾಗಿ ಬಾಲಗಂಗಾಧರ ತಿಲಕರು ರೂಪಿಸಿದ್ದರು. ಸ್ವಾತಂತ್ರ್ಯದ 'ಅಮೃತ ಮಹೋತ್ಸವ' ಸಂದರ್ಭದಲ್ಲೂ ಗಣೇಶೋತ್ಸವವನ್ನು ಸ್ವಾತಂತ್ರ್ಯದ ರೂಪಕವನ್ನಾಗಿ ನೋಡುವುದು ಸಾಧ್ಯವಿದೆ. ಈ ಸ್ವಾತಂತ್ರ್ಯ ರಾಜಕೀಯವಾದುದಲ್ಲ, ಸಾಮಾಜಿಕ ಎಚ್ಚರ ಮತ್ತು ವೈಚಾರಿಕವಾದುದು; ಮೌಢ್ಯದ ಕಬಂಧಹಸ್ತಗಳಿಂದ, ಜಾತಿ–ಮತಗಳ ಬಂಧನದಿಂದ ಬಿಡುಗಡೆಯನ್ನು ಹಂಬಲಿಸುವ ಸ್ವಾತಂತ್ರ್ಯವಿದು. ಭಕ್ತಿಯ ಆತ್ಯಂತಿಕ ಉದ್ದೇಶವೇ ವ್ಯಕ್ತಿತ್ವವನ್ನು ಸಂಕುಚಿತಗೊಳಿಸುವ ಬಂಧನಗಳಿಂದ ಮನುಷ್ಯನ ಬಿಡುಗಡೆಗೊಳಿಸುವುದಾಗಿದೆ. ಭಕ್ತಿಯ ಹಾದಿ ಮನುಷ್ಯನನ್ನು ಮತ್ತಷ್ಟು ಮಾನವೀಯಗೊಳಿಸುವುದಾಗಿದೆ ಎನ್ನುವುದಕ್ಕೆ ಶರಣರ ಹಾಗೂ ದಾಸರ ಬಹು ಅಮೂಲ್ಯ ಉದಾಹರಣೆಗಳು ನಮಗೆ ದೀವಿಗೆಗಳಾಗಿವೆ. ಆ ಪರಂಪರೆಯ ಮುಂದುವರಿದ ಕೊಂಡಿಯಾಗಿ ಇಂದಿನ ಗಣೇಶೋತ್ಸವಗಳನ್ನು ರೂಪಿಸುವುದು ಸಾಧ್ಯವಿದೆ. ಗಣೇಶೋತ್ಸವ ನಮ್ಮೊಳಗೆ ರೂಪಿಸಬೇಕಾದುದು ವಿಶ್ವಪ್ರಜ್ಞೆಯನ್ನು, ಸಾಮಾಜಿಕ–ಸಾಂಸ್ಕೃತಿಕ ಸಾಮರಸ್ಯದ ಹಂಬಲವನ್ನು.

ದುರದೃಷ್ಟವಶಾತ್, ಭಕ್ತಿಯನ್ನು ಭಾವೋದ್ರೇಕದ ಸಾಧನವನ್ನಾಗಿ ಕೆಲವರು ಬಳಸಿಕೊಳ್ಳುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಗಣೇಶೋತ್ಸವಗಳ ಸಾಮಾಜಿಕ–ಸಾಂಸ್ಕೃತಿಕ ಮೌಲ್ಯಗಳನ್ನು ಕುಗ್ಗಿಸುವ ಪ್ರಯತ್ನಗಳೂ ನಡೆಯುತ್ತಿವೆ. ಅಂಥ ರಾಜಕೀಯಪ್ರೇರಿತ ಪ್ರಯತ್ನಗಳನ್ನು ಗಣೇಶೋತ್ಸವ ವೇದಿಕೆಯಿಂದ ದೂರವಿಡುವ ಹೊಣೆಗಾರಿಕೆ ಜನಸಾಮಾನ್ಯರದೇ ಆಗಿದೆ. ಜನ ಬಯಸುವುದು ನೆಮ್ಮದಿಯ ಬಾಳುವೆಯನ್ನೇ ಹೊರತು, ಅನುದಿನವೂ ಸಂಘರ್ಷದಿಂದ ಕೂಡಿದ ಬದುಕನ್ನಲ್ಲ. ಆದರೆ, ರಾಜಕಾರಣಿಗಳಿಗೆ ಬೇಕಾದುದು ಸಂಘರ್ಷದಿಂದ ಕೂಡಿದ ಸಮಾಜ. ಆರೋಗ್ಯಕರ ಸಮಾಜದಲ್ಲಿ ಸಂಘರ್ಷವನ್ನು ಸೃಷ್ಟಿಸುವ ಮೂಲಕ ರಾಜಕಾರಣಿಗಳು ತಮ್ಮ ಜವಾಬ್ದಾರಿ ನಿರ್ವಹಣೆಯ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ; ಆ ಹಾದಿಯಲ್ಲಿ ಮತ್ತಷ್ಟು ಮಗದಷ್ಟು ಭ್ರಷ್ಟರಾಗುತ್ತಿದ್ದಾರೆ.

ಭಕ್ತಿ ಮತ್ತು ಸಾರ್ವಜನಿಕ ಹಿತದ ನಡುವೆ ರಾಜಕೀಯ ಹಿತಾಸಕ್ತಿ ನುಸುಳಲು ಪ್ರಜ್ಞಾವಂತ ಜನ ಅವಕಾಶ ಕಲ್ಪಿಸಬಾರದು. ಗಣೇಶೋತ್ಸವವನ್ನು ರಾಜಕಾರಣದ ಸಂಕುಚಿತ ಚೌಕಟ್ಟಿನಿಂದ ಮುಕ್ತಗೊಳಿಸಿ, ಅದನ್ನು ಸಾಮಾಜಿಕ ಕಾಳಜಿಯ ಹಾಗೂ ಸಾಂಸ್ಕೃತಿಕ ಮಹತ್ವದ ವಿಶಿಷ್ಟ ಸಾಧ್ಯತೆಯಾಗಿ ಆಚರಿಸಬೇಕು. ಭಕ್ತಿಯೊಂದಿಗೆ ವಿವೇಚನೆ ಮಿಳಿತಗೊಳ್ಳುವುದು ಈ ಹೊತ್ತಿನ ಅಗತ್ಯ.

■ **ರಘುನಾಥ ಚ.ಹ.**

**ಭಕ್ತಿಯನ್ನು ಭಾವೋದ್ರೇಕದ ಸಾಧನವನ್ನಾಗಿ ಕೆಲವರು ಬಳಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಗಣೇಶೋತ್ಸವಗಳ ಸಾಮಾಜಿಕ–ಸಾಂಸ್ಕೃತಿಕ ಮೌಲ್ಯವನ್ನು ಕುಗ್ಗಿಸುವ ಪ್ರಯತ್ನಗಳು ನಡೆಯುತ್ತಿವೆ. ಅಂಥ ಪ್ರಯತ್ನಗಳನ್ನು ಗಣೇಶೋತ್ಸವ ವೇದಿಕೆಯಿಂದ ದೂರವಿಡುವ ಹೊಣೆಗಾರಿಕೆ ಜನಸಾಮಾನ್ಯರದು.**



ಈಶ್ವರ್